ಪಿಂಟೊ ಮನೆತನದವರ ವೈಶಿಷ್ಟ್ಯವಾಗಿತ್ತು.

ಇತ್ತೀಚೆಗೆ ಇಮಾಜುಗಳ ವ್ಯಾಪಾರ ಕಡಿಮೆಯಾಗಿ ಇಮಾಜುಗಳನ್ನು ಮಾಡುತ್ತಿದ್ದ ಪಿಂಟೊ ಮನೆತನದ ಬಹಳಷ್ಟು ಜನರು ಬೇರೆ ಬೇರೆ ಉದ್ಯೋಗಗಳನ್ನು ಅರಸಿ ಮುಂಬೈಗೋ ಕೊಲ್ಲಿ ರಾಷ್ಟ್ರಗಳಿಗೋ ಹೊರಟು ಹೋಗಿದ್ದರು. ಆದರೆ, ಬವ್ತೀಸ ಮತ್ತು ಅವನ ತಮ್ಮ ಸಿಲಾ ಇದೇ ಕಾಯಕವನ್ನು ಮುಂದುವರೆಸಿಕೊಂಡು ತಂತಮ್ಮ ಕುಟುಂಬಗಳನ್ನು ಪೋಷಿಸಿಕೊಂಡು ಬರುತ್ತಿದ್ದರು.

ಈವರೆಗೆ ಚರ್ಚುಗಳಲ್ಲಿ ಬಹಳಷ್ಟು ಸಂತರ ಇಮಾಜುಗಳನ್ನು ಇಡುತ್ತಿದ್ದರು. ಪ್ರತಿ ಕ್ರೈಸ್ತರ ಮನೆ ಮನೆಗಳಲ್ಲೂ ಅವರ ಘನತೆಗೆ ತಕ್ಕಂತೆ ಮರದಲ್ಲಿ ಮಾಡಿದ್ದ ವಿವಿಧ ಗಾತ್ರದ, ವಿವಿಧ ನಮೂನೆಯ ದೇವರ ಪೀಠಗಳು ಇರುತ್ತಿದ್ದವು. ಇವುಗಳಲ್ಲಿ ಒಂದಾದರೂ ಶಿಲುಬೆಯ ಮೇಲೆ ತೂಗುತ್ತಿರುವ ಕ್ರಿಸ್ತನ ಇಮಾಜಿ ಮತ್ತು ಸುತ್ತಮುತ್ತ ವಿವಿಧ ಸಂತರ ಇಮಾಜುಗಳು ತುಂಬಿರುತ್ತಿದ್ದವು. ಮನೆಯಲ್ಲಿ ಬೈಬಲ್ ಇರದಿದ್ದರೂ ನಡುಕೋಣೆಯ ಗೋಡೆಯ ಮೇಲೆ ದೇವರ ಪೀಠ ಕಡ್ಡಾಯವೆಂಬಂತೆ ರಾರಾಜಿಸುತ್ತಿತ್ತು. ಕೆಲವು ಸ್ಥಿತಿವಂತ ಕ್ರೈಸ್ತರ ಮನೆಯ ಅಂಗಳದಲ್ಲಿ ಗ್ರೊಟ್ಟೊ ಎಂದು ಕರೆಯುವ ಒಂದು ಕೃತಕ ಗುಹೆ ಇರುತ್ತಿತ್ತು. ಅದರೊಳಗೆ ಆಳೆತ್ತರದ, ಸಂತ ಜೋಸೆಫರೋ, ಸಂತ ಅಂತೋಣಿಯವರೋ ಅಥವ ಮರಿಯಮ್ಮನವರ ಇಮಾಜಿಯನ್ನು ಇಟ್ಟಿರುತ್ತಿದ್ದರು. ಇತ್ತೀಚೆಗೆ ಈ ರೀತಿಯ ಬಹಿರಂಗ ಧಾರ್ಮಿಕ ಪ್ರದರ್ಶನ ಕಡಿಮೆಯಾಗತೊಡಗಿತ್ತು. ಎಲ್ಲೆಡೆ ಕಾಂಕ್ರಿಟ್ ಮನೆಗಳಾಗತೊಡಗಿದ್ದವು. ದೇವರ ಪೀಠಗಳು, ಇಮಾಜುಗಳು ಗೋದಾಮು ಸೇರಿದವು. ಕೆಲವರು ಬಿಸಾಕಿದ್ದರು. ಆದರೂ ತಮ್ಮ ಕ್ರೈಸ್ತ ಅಸ್ಮಿತೆಯನ್ನು ಮುಚ್ಚಿಟ್ಟುಕೊಳ್ಳಲಾಗದೆ ಚಿನ್ನದ ಲೇಪದಲ್ಲೋ ಅಥವ ಸ್ಟೀಲಿನಲ್ಲೋ ಇಲ್ಲ ಬೀಟೆ ಮರದಲ್ಲಿ ಶಿಲುಬೆಯ ಮೇಲೆ ತೂಗುತ್ತಿರುವ ಕ್ರಿಸ್ತನನ್ನು ಸ್ಥಾಪಿಸುವ ಫ್ಯಾಷನ್ ಶುರುವಾಗಿತ್ತು. ಕ್ರೈಸ್ತರಲ್ಲಿ ಮಣ್ಣಿನ ಇಮಾಜುಗಳ ಮೇಲಿನ ಭಕ್ತಿಯಷ್ಟೇ ಕಡಿಮೆಯಾಯಿತೋ ಇಲ್ಲ ದೇವರ ಮೇಲಿನ ಭಕ್ತಿ ಕಡಿಮೆಯಾಯ್ತೋ ಗೊತ್ತಿಲ್ಲ. ಅಂತೂ ಮಣ್ಣಿನ ಇಮಾಜುಗಳ ಬೇಡಿಕೆ ಕುಸಿಯತೊಡಗಿತು.

ಕೆಲವು ವರ್ಷಗಳ ಹಿಂದೆ ಚರ್ಚ್ ಹಬ್ಬಗಳ ಸಂತೆಗಳಲ್ಲಿ ಸಂತರ ಇಮಾಜುಗಳ ವ್ಯಾಪಾರ ಜೋರಾಗಿ ನಡೆಯುತ್ತಿತ್ತು. ಕ್ಯಾಥೋಲಿಕ್ ಕ್ರೈಸ್ತರ ಚರ್ಚುಗಳ ಹಬ್ಬದ ಸಂತೆಗಳಲ್ಲಿ ಜಪಮಾಲೆಗಳು, ಸಂತರ ಪದಕಗಳು, ಮತ್ತು ಇತರೆ ವಸ್ತುಗಳನ್ನು ಕೊಂಡುಕೊಳ್ಳುವಂತೆ ಭಕ್ತರು ಇಮಾಜುಗಳನ್ನೂ ಕೊಳ್ಳುತ್ತಿದ್ದರು. ಯಾವುದಾದರೂ ಚರ್ಚಿನ ಹಬ್ಬ ನವೆಂಬರ್ ಮತ್ತು ಡಿಸೆಂಬರ್ ಮಾಸಗಳಲ್ಲಿ ನಡೆಯಿತೆಂದರೆ ಕ್ರಿಸ್ಮಸ್ ಗೋದಲಿಗಳಿಗೆ ಬೇಕಾದ ಇಮಾಜುಗಳ ವ್ಯಾಪಾರ ಭರ್ಜರಿಯಾಗಿ ನಡೆಯುತ್ತಿತ್ತು. ಮೇವಿನ ತೊಟ್ಟಿಯಲ್ಲಿ ಮಲಗಿರುವ ಬಾಲ ಯೇಸುವಿನಿಂದ ಹಿಡಿದು, ಮೂವರು ರಾಜರು, ಕುರುಬರು ಮತ್ತು ಕುರಿಗಳ ಇಮಾಜುಗಳ ವ್ಯಾಪಾರದೊಂದಿಗೆ ಸಂತ ಅಂತೋಣಿ, ಸಂತ ಲಾರೆನ್ಸ್, ಕನ್ಯಾ ಮರಿಯಮ್ಮ, ಪವಿತ್ರ ಕುಟುಂಬದ ಇಮಾಜುಗಳೂ ಹೆಚ್ಚೆಚ್ಚು ವ್ಯಾಪಾರವಾಗುತ್ತಿದ್ದವು.

ಬವ್ತೀಸನ ತಂದೆ ಅವನು ಸಣ್ಣ ಹುಡುಗನಾಗಿದ್ದಾಗಲೇ ತೀರಿಕೊಂಡಿದ್ದರಿಂದ ಅವನು ಮತ್ತು ಅವನ ತಮ್ಮ ಸಿಲಾ ಕುಲ ಕಸಬನ್ನೇ ಮುಂದುವರಿಸಿಕೊಂಡು ಬಂದಿದ್ದರು. ಇಬ್ಬರು ತಂಗಿಯರಿಗೆ ಒಳ್ಳೆಯ ಕಡೆ ಗಂಡುಗಳನ್ನು ನೋಡಿ ಮದುವೆ ಮಾಡಿಸಿದ್ದರು. ಮತ್ತಿಬ್ಬರು ಸಹೋದರರು ಇಮಾಜಿ ಮಾಡುವ ಜಂಜಾಟವೇ ಬೇಡವೆಂದು ಕೆಲಸ ಅರಸುತ್ತಾ ಬೊಂಬಾಯಿಗೆ ಹೋಗಿ ಅಲ್ಲಿಂದ ಕೊಲ್ಲಿ ದೇಶಗಳಿಗೆ ಹಾರಿದ್ದರು.

ಇವೆಲ್ಲಾ ರಗಳೆಗಳು ಮುಗಿದ ಅನಂತರವೇ ಬವ್ತೀಸ ಮತ್ತು ಸಿಲಾ ಮದುವೆಯಾಗಿದ್ದು. ಬವ್ತೀಸನಿಗೆ ನಾಲ್ಕು ಮಕ್ಕಳಾದರೆ ಸಿಲಾನಿಗೆ ಮಕ್ಕಳೇ ಆಗಲಿಲ್ಲ. ಎಲ್ಲಾ ದೈವಿಚ್ಛೆ ಎಂದು ಇಬ್ಬರೂ ಅಣ್ಣತಮ್ಮಂದಿರು